ಇ) ಹೆಂಡದಲ್ಲಿ ಅಕ್ರಮವಾಗಿ ಅನೇಕ ರಾಸಾಯನಿಕ ಪದಾರ್ಥಗಳನ್ನು ಕಲಸಿ ಕಲಬೆರಕೆ ಮಾಡಿ ಹೆಂಡ ಕುಡಿಯುವವರ ಆರೋಗ್ಯಕ್ಕೆ ಹಾನಿ ಮಾಡುತ್ತಿರುವುದಾಗಿ ದೂರುಗಳು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಈ ಕಲಬೆರಕೆಯನ್ನು ತಡೆಹಿಡಿಯಲು ಮತ್ತು ಹೆಂಡ ಕುಡಿಯುವವರ ಆರೋಗ್ಯ ಕಾಪಾಡಲು ನಿರ್ದಿಷ್ಟ ಕ್ರಮಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆಯೆ ?

ಉ) ಈ ಬಗ್ಗೆ ಎಷ್ಟು ಮೊಕದ್ದಮೆಗಳನ್ನು ಹಾಕಲಾಗಿದೆ ಹಾಗೂ ಎಷ್ಟು ಪರವಾನಗಿಗಳನ್ನು ರದ್ದುಪಡಿಸಲಾಗಿದೆ ?

ಶ್ರೀ ರಮೇಶ್ ಜಿಗಜಿಣಗಿ (ಅಬಕಾರಿ ರಾಜ್ಯ ಸಚಿವರು).—

ಅ) ೪೮.೨೮ ಕೋಟಿ ರೂಪಾಯಿಗಳು (೧೯೮೫–೮೬ರ ಅಬ್ಕಾರಿ ವರ್ಷಕ್ಕೆ).

ಆ) ಸುಮಾರು ೧೮ ಕೋಟಿ ಲೀಟರ್.

ಇ) ಇಲ್ಲ.

ಈ) ಕಲಬೆರಕೆಯನ್ನು ತಡೆಹಿಡಿಯಲು ಮತ್ತು ಹೆಂಡ ಕುಡಿಯುವವರ ಆರೋಗ್ಯ ಕಾಪಾಡಲು ನಿಯತಕಾಲಿಕವಾಗಿ ಹೆಂಡವನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ವಿತರಣೆ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಉ) ಈವರೆಗೆ ೩ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ ಮಂತ್ತು ಯಾವ ಪರವಾನಗಿಗಳನ್ನೂ ರದ್ದು ಪಡಿಸಿರುವುದಿಲ್ಲ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಮುದ್ರಣ ಕಾರ್ಯಗಳಿಗಾಗಿ ಖರ್ಚು ಮಾಡಿರುವುದರ ಬಗ್ಗೆ

೫೧೨ ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ).–ಮಾನ್ಯ ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಮುದ್ರಣ ಕಾರ್ಯಗಳಿಗಾಗಿ ಖರ್ಚು ಮಾಡಿದ ಹಣ ಎಷ್ಟು?

ಆ) ವಿದ್ಯುಚ್ಛಕ್ತಿ ಮಂಡಳಿಯು ತನ್ನದೇ ಆದ ಸ್ವಂತ ಮುದ್ರಣಾಲಯವನ್ನು ಹೊಂದಲು ಇರುವ ತೊಂದರೆ ಏನು?

ಶ್ರೀ ಜೆ. ಎಚ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).–

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ೧೯೫೬–೫೭ನೇ ಸಾಲಿನಿಂದ ೩೧–೦೨–೮೫ರವರೆಗೆ ಮುದ್ರಣಕ್ಕಾಗಿ ೫೯೬.೭೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ.

ಆ) ವಿದ್ಯುಚ್ಛಕ್ತಿ ಮಂಡಲಿಯು ತನ್ನದೇ ಆದ ಸ್ವಂತ ಮುದ್ರಣಾಲಯವನ್ನು ಹೊಂದುವುದು ಆರ್ಥಿಕವಾಗಿ ಲಾಭದಾಯಕವಲ್ಲವೆಂದು ಪರಿಗಣಿಸಲಾಗಿದೆ ಮತ್ತು ಇದರಿಂದ ಆಡಳಿತ ತೊಡಕುಗಳೂ ಸಹ ಉಂಟಾಗಬಹುದು.

ಹೊಸದುರ್ಗ ತಾಲ್ಲೂಕು ಮಾಡದ ಕೆರೆ ಹೋಬಳಿ ದೇವಪುರದಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವ ಬಗ್ಗೆ

೯೮ ಶ್ರೀ ಜಿ. ರಾಮದಾಸ್ (ಹೊಸದುರ್ಗ) ಮಾನ್ಯ ಕಂದಾಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ತಾಲ್ಲೂಕು ಮಾಡದ ಕೆರೆ ಹೋಬಳಿ ದೇವಪುರ ರಿ.ಸ. ನಂ. ೧೫೫ರಲ್ಲಿ ಸಾಗುವಳಿಗಾಗಿ ಎಷ್ಟು ಎಕರೆ ಜಮೀನು ರಿಲೀಜ್ ಆಗಿದೆ?

ಅ) ಹಾಗಿದ್ದಲ್ಲಿ ಬಹು ದಿನಗಳಿಂದಲೂ ಇಡೀ ಸ. ನಂ. ಪೂರ್ತಿ ಬಗರ್ ಹುಕುಂ ಸಾಗುವಳಿಯಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಇ) ಈ ನಂಬರ್‌ನಲ್ಲಿ ಇಬ್ಬರು ಅನರ್ಹರಾದ ವ್ಯಕ್ತಿಗಳು ತಲಾ ೪೦ ಎಕರೆಯಂತೆ ೮೦ ಎಕರೆ ಜಮೀನನ್ನು ವಶಪಡಿಸಿಕೊಂಡಿರುವುದು ನಿಜವೇ?

ಈ) ಈ ಸರ್ವೆ ನಂಬರ್‌ನಲ್ಲಿ ಕೆಲವು ಸಿರಿವಂತ ಜಮೀನುದಾರರು ನೂರಾರು ತೆಂಗಿನ ಸಸಿ ಹಾಕಿಸಿ ಸ್ವಾಧೀನ ಪಡಿಸಿಕೊಂಡಿರುವುದರಿಂದ ಸರಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವುದು ಸರಕಾರದವರು ಗಮನಿಸಿದ್ದಾರೆಯೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು)

ಅ) ಹೊಸದುರ್ಗ ತಾಲ್ಲೂಕು, ಮಾಡದ ಕೆರೆ ಹೋಬಳಿ ದೇವಪುರ ಗ್ರಾಮದ ಸ. ನಂ. ೦೫೫ ರಲ್ಲಿ ೩೫೦ ಎಕರೆ ಜಮೀನನ್ನು ಕಂದಾಯ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.

ಆ) ದೇವಪುರ ಗ್ರಾಮದ ಸ. ನಂ. ೧೫೫ರಲ್ಲಿ ಪೂರ್ತಿ ಜಮೀನು ಬಗರ್ ಹುಕುಂ ಸಾಗುವಳಿಯಾಗಿರುವುದಿಲ್ಲ. ಆದರೆ ೪೫ ಜನರು ಮಾತ್ರ ತಲಾ ೨-೦೦ ಎಕರೆಯಂತೆ ೧೯೮೦-೮೧ರಿಂದ ಅನಧಿಕೃತ ಸಾಗುವಳಿ ಮಾಡುತ್ತಿದ್ದಾರೆ.

ಇ) ಈ ಸರ್ವೆ ನಂಬರ್‌ನಲ್ಲಿ ಇಬ್ಬರು ಅನರ್ಹರಾದ ವ್ಯಕ್ತಿಗಳು ತಲಾ ೪೦-೦೦ ಎಕರೆಯಂತೆ ೮೦ ಎಕರೆ ಜಮೀನನ್ನು ತಮ್ಮ ವಶಪಡಿಸಿಕೊಂಡಿರುವುದಿಲ್ಲ.

ಈ) ಈ ಸ. ನಂ.ನಲ್ಲಿ ಕೆಲವು ಸಿರಿವಂತ ಜಮೀನುದಾರರು ನೂರಾರು ತೆಂಗಿನ ಸಸಿಗಳನ್ನು ಹಾಕಿಸಿ ಸ್ವಾಧೀನ ಪಡಿಸಿಕೊಂಡು ಸರಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವುದು ಸರಕಾರದ ಗಮನಕ್ಕೆ ಬಂದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಸಾರ್ವಜನಿಕ ದಾರಿ, ಸಾರ್ವಜನಿಕ ರಸ್ತೆ ಇವುಗಳನ್ನು ಪಹಣಿ ಪತ್ರಿಕೆಗಳಲ್ಲಿ ನಮೂದಿಸುವ ಬಗ್ಗೆ

*೫೧೬. ಶ್ರೀ ಕೆ. ಕುಶಾಲ (ಸುಳ್ಯ)- ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಹಣಿ ಪತ್ರಿಕೆಗಳಲ್ಲಿ ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕ ದಾರಿ, ಸಾರ್ವಜನಿಕ ರಸ್ತೆ ಇವುಗಳು ಮಾಮೂಲಾಗಿ ಇದ್ದರೂ ಪಹಣಿಯಲ್ಲಿ ನಮೂದಿಸಿಲ್ಲದಿರುವುದರಿಂದ ಆ ಬಗ್ಗೆ ಕ್ರಮ ಕೈಗೆ ಒಳ್ಳಲಾಗುವುದೇ ?

ಆ) ಖಾಸಗಿ ಜಮೀನುಗಳಲ್ಲಿ ಅತೀ ಪ್ರಾಮುಖ್ಯವಾದ ಕಡೆಗಳಲ್ಲಿ ಇನ್ನೂ ಹೆಚ್ಚಿನ ಮಾನವರೂಲಿ ದಾರಿ ರಸ್ತೆಗಳಿಗೆ ಸಾರ್ವಜನಿಕ ಅರ್ಜಿಯಂತೆ ಅಗತ್ಯತೆಯನ್ನು ಪರಿಶೀಲಿಸಿ ಪಹಣಿಯಲ್ಲಿ ನಮೂದಿಸುವಂತೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು)—

ಅ) ದಾರಿ ಯಾ ರಸ್ತೆಯ ಹಕ್ಕನ್ನು ಊರ್ಜಿತ ಇಟ್ಟಿರುವ ಪ್ರಕರಣಗಳಲ್ಲಿ ಈಗಾಗಲೇ ಈ ಬಗ್ಗೆ ಪಹಣಿಯಲ್ಲಿ ದಾಖಲೆ ಮಾಡಲಾಗಿದೆ.

ಆ) ಖಾಸಗೀ ಜಮೀನುಗಳಲ್ಲಿ ದಾರಿ ಯಾ ರಸ್ತೆ ಊರ್ಜಿತದ ಬಗ್ಗೆ ಬೇಡಿಕೆ ಬಂದಲ್ಲಿ ತನಿಖೆ ನಡೆಸಿ ಅಗತ್ಯವೆಂದು ಕಂಡುಬಂದಲ್ಲಿ ಸಹಾಯಕ ಕಮೀಷನರಿಗೆ ಭೂ ಕಂದಾಯ ಕಾನೂನು ಸೆಕ್ಷನ್ ೬೭ (೨) ರಂತೆ ದಾರಿ, ರಸ್ತೆ ಊರ್ಜಿತ ಇರುವ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸಿ ಸೂಕ್ತ ಆದೇಶ ಆದ ನಂತರ ಪಹಣಿಯಲ್ಲಿ ದಾಖಲು ಮಾಡಲಾಗುತ್ತದೆ.